ಕೋಟಿಗಳನ್ನು ಸಾಲದ ರೂಪದಲ್ಲಿ ಪಡೆದು ಬೆಳಗಾವಿ, ಗುಲ್ಬರ್ಗಾ, ಹುಬ್ಬಳ್ಳಿ- ಧಾರವಾಡ ಮಹಾನಗರಪಾಲಿಕೆಗಳಿಗೆ ತಲಾರೂ. 2 ಕೋಟಿಯಂತೆ, ನಗರಸಭೆಗಳಿಗೆ ತಲಾ ರೂ. 1 ಕೋಟಿಯಂತೆ, ಪುರಸಭೆಗಳಿಗೆ ತಲಾ ರೂ. 50 ಲಕ್ಷದಂತೆ, ಪಟ್ಟಣ ಪಂಚಾಯತಿಗಳಿಗೆ ತಲಾ ರೂ. 25 ಲಕ್ಷದಂತೆ ಸಾಲವನ್ನು ಮಂಜೂರು ಮಾಡಲು ಉದ್ದೇಶಿಸಿದೆ.

ರಾಜ್ಯದ ವಿವಿಧ ತಾಲ್ಲೂಕು ಕೇಂದ್ರಗಳಲ್ಲಿ ಅಂಬೇಡ್ಕರ್ ಭವನದ ನಿರ್ಮಾಣ.

3346(4389) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ವಿವಿಧ ತಾಲ್ಲೂಕುಗಳಲ್ಲಿ ಅಂಬೇಡ್ಕರ್ ಭವನಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಸರ್ಕಾರವು ಹಮ್ಮಿಕೊಂಡಿದೆಯೇ?

2) ಹಾಗಿದಲ್ಲಿ, ಈವರೆಗೆ ಯಾವ ಯಾವ ತಾಲ್ಲೂಕುಗಳಲ್ಲಿನ ಕೇಂದ್ರ ಸ್ಥಾನದಲ್ಲಿ ಅಂಬೇಡ್ಕರ್ ಭವನ ನಿರ್ಮಿಸಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು).

3) ಅಂಬೇಡ್ಕರ್ ಭವನದ ಇಲ್ಲದ ತಾಲ್ಲೂಕು ಕೇಂದ್ರಗಳಲ್ಲಿ, ಈ ಭವನಗಳನ್ನು ಕಟ್ಟಲು ಪ್ರಸಕ್ತ ಸಾಲಿನಲ್ಲಿ ಇದಕ್ಕಾಗಿ ಹಾದಿರಿಸಿರುವ ಅನುದಾನದ ಮೊತ್ತವೆಷ್ಟು?

4) ಮಂಡ್ಯ ತಾಲ್ಲೂಕು ಕೇಂದ್ರದಲ್ಲಿನ ಅಂಬೇಡ್ಕರ್ ಭವನದ ನಿರ್ಮಾಣ ಯಾವ ಹಂತದಲ್ಲಿದೆ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

1) ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದು ಮಿನಿ ಅಂಬೇಡ್ಕರ್ ಭವನವನ್ನು 5 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸುವ ಕಾರ್ಯಕ್ರಮವು ಹಾಲಿ ಜಾರಿಯಲ್ಲಿದೆ.

2) ತಾಲ್ಲೂಕು ಕೇಂದ್ರ ಸ್ಥಾನದಲ್ಲಿ ನಿರ್ಮಿಸಲಾದ ಮಿನಿ ಅಂಬೇಡ್ಕರ್ ಭವನದ ಬಗ್ಗೆ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ - 1ರಲ್ಲಿ ಒದಗಿಸಿದೆ.

3) ಮಿನಿ ಅಂಬೇಡ್ಕರ್ ಭವನಗಳನ್ನು ಕಟ್ಟಲು ರೂ.150 ಲಕ್ಷ ರೂ.ಗಳನ್ನು ಪ್ರಸಕ್ತ ಸಾಲಿನಲ್ಲಿ ಒದಗಿಸಿಕೊಳ್ಳಲಾಗಿದೆ.

4) ಮಂಡ್ಯ ನಗರದಲ್ಲಿ ಮಿನಿ ಅಂಬೇಡ್ಕರ್ ಭವನವನ್ನು ನಿರ್ಮಿಸಲು ಮಂಜೂರಾತಿ ನೀಡಲಾಗಿದೆ. ಈ ಭವನವನ್ನು ದೊಡ್ಡ ಪ್ರಮಾಣದಲ್ಲಿ ನಿರ್ಮಿಸಲು ಜಿಲ್ಲಾ ಪಂಚಾಯತ್ ಹತ್ತು ಲಕ್ಷ ರೂ. ಬಿಡುಗಡೆ ಮಾಡಿದ್ದು, ನಿವೇಶನ ಲಭ್ಯವಿದ್ದು ಭವನದ ಮಾದರಿ ನಕ್ಷೆಯು ಸಿದ್ಧವಿದ್ದು ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ ಇವರು ಮುಂದಿನ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಅನುಬಂಧ - 1

ತಾಲ್ಲೂಕು ಕೇಂದ್ರ ಸ್ಥಾನಗಳಲ್ಲಿ ನಿರ್ಮಿಸಲಾದ ಮಿನಿ ಅಂಬೇಡ್ಕರ್ ಭವನಗಳ ವಿವರ

| | | | |
|---|---|---|---|
| 1) | ತುಮಕೂರು ಜಿಲ್ಲೆ | - | 1 |
| | 1) ಪಾವಗಡ | | |
| 2) | ಮೈಸೂರು ಜಿಲ್ಲೆ | - | 1 |
| | 1) ಪಿರಿಯಾಪಟ್ಟಣ | | |
| 3) | ಮಂಡ್ಯ ಜಿಲ್ಲೆ | - | 1 |
| | 1) ಶ್ರೀರಂಗಪಟ್ಟಣ | | |
| 4) | ಹಾಸನ ಜಿಲ್ಲೆ | - | 1 |
| | 1) ಬೇಲೂರು | | |
| 5) | ಚಿಕ್ಕಮಗಳೂರು ಜಿಲ್ಲೆ | - | 2 |
| | 1) ಕೊಪ್ಪ | | |
| | 2) ಕಡೂರು | | |
| 6) | ದಕ್ಷಿಣ ಕನ್ನಡ ಜಿಲ್ಲೆ | - | 2 |
| | 1) ಬೆಳ್ತಂಗಡಿ | | |
| | 2) ಭಂಟ್ವಳ್ | | |
| 7) | ಬೆಳಗಾಂ ಜಿಲ್ಲೆ | - | 4 |
| | 1) ಸವದತ್ತಿ | | |
| | 2) ಅಥಣಿ | | |
| | 3) ಹುಕ್ಕೇರಿ | | |
| | 4) ಚಿಕ್ಕೋಡಿ | | |
| 8) | ಬಿಜಾಪುರ | - | 1 |
| | 1) ಮುದ್ದೇಬಿಹಾಳ್ | | |
| 9) | ಧಾರವಾಡ | - | 1 |
| | 1) ಕುಂದಗೋಳ್ | | |

| | | |
|---|---|---|
| 10) | ಹಾವೇರಿ - | 3 |
| | 1) ಹಾನಗಲ್ | |
| | 2) ರಾಣೆಬೆನ್ನೂರು | |
| | 3) ಬ್ಯಾಡಗಿ | |
| 11) | ಗದಗ - | 3 |
| | 1) ಮುಂಡರ್ಗಿ | |
| | 2) ರೋಣ | |
| | 3) ನರಗುಂದ | |
| 12) | ಉತ್ತರ ಕನ್ನಡ | 7 |
| | 1) ಸಿರ್ಸಿ | |
| | 2) ಕುಮಟಾ | |
| | 3) ಹಳಿಯಾಳ್ | |
| | 4) ಮುಂಡಗೋಡ್ | |
| | 5) ಅಂಕೋಲ | |
| | 6) ಹೊನ್ನಾವರ | |
| | 7) ಭಟ್ಕಳ | |
| 13) | ಗುಲ್ಬರ್ಗಾ | 3 |
| | 1) ಚಿಂಚೋಳಿ | |
| | 2) ಸೇಡಂ | |
| | 3) ಅಫ್ಜಲ್‌ಪುರ | |
| 14) | ಬೀದರ್ | 1 |
| | 1) ಬಸವಕಲ್ಯಾಣ | |
| 15) | ರಾಯಚೂರು | 3 |
| | 1) ದೇವದುರ್ಗ | |
| | 1) ಲಿಂಗಸೂಗುರು | |
| 16) | ಕೊಪ್ಪಳ | 1 |
| | 1) ಕೊಪ್ಪಳ | |
| | ಒಟ್ಟು | 34 |